ಕರ್ನಾಟಕ ಸರ್ಕಾರ

# ಪಂಚಾಯತ್ ರಾಜ್ ಸದಸ್ಯರ ಹಾಗೂ ನಗರ ಸ್ಥಳೀಯ ಸಂಸ್ಥೆಗಳ ಸದಸ್ಯರ ಸಮಾವೇಶ

## ದಿನಾಂಕ : 23-01-2004

# ಬೇಲೂರ ಘೋಷಣೆ

ಕರ್ನಾಟಕ ಸರ್ಕಾರ ಮತ್ತು ಸ್ಥಳೀಯ ಸಂಸ್ಥೆಗಳ ಸದಸ್ಯರಾದ ನಾವು ಜನವರಿ 23, 2004 ರಂದು ಧಾರವಾಡ ತಾಲ್ಲೂಕು ಬೇಲೂರ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ನಡೆಯುತ್ತಿರುವ ಪಂಚಾಯತ್ ರಾಜ್ ಮತ್ತು ನಗರ ಸ್ಥಳೀಯ ಸಂಸ್ಥೆಗಳ ಸಮಾವೇಶದಲ್ಲಿ ಈ ಜಂಟಿ ಘೋಷಣೆ ಮಾಡುತ್ತೇವೆ.

ವಿಕೇಂದ್ರೀಕರಣ ಆಂದೋಲನವನ್ನು ಮುನ್ನಡೆಸಿಕೊಂಡು ಹೋಗಲು ಮತ್ತು ಪಂಚಾಯತ್ ರಾಜ್ ಹಾಗೂ ನಗರ ಸ್ಥಳೀಯ ಸಂಸ್ಥೆಗಳು ಜನರ ಸೇವೆ ಮಾಡಲು ಇನ್ನೂ ಹೆಚ್ಚಿನ ಅಧಿಕಾರ ಕೊಡಲು ಕರ್ನಾಟಕ ಸರ್ಕಾರವು ಈ ಕೆಳಗಿನ ಹೊಸ ಹೆಜ್ಜೆಗಳನ್ನಿಡಲು ಬದ್ಧವಾಗಿದೆ.

೧. ಯಾವ ಕೆಲಸವನ್ನು ಯಾವ ಹಂತದಲ್ಲಿ ನಿರ್ವಹಿಸಬೇಕೋ ಆ ಹಂತದಲ್ಲಿ ನಿರ್ವಹಿಸಬೇಕು ಎಂಬ ತತ್ವದ ಪ್ರಕಾರ ಮೂರೂ ಹಂತದ ಪಂಚಾಯತ್ ರಾಜ್ ಸಂಸ್ಥೆಗಳ ಕೆಲಸಗಳನ್ನು ಚಟುವಟಿಕೆ ನಕ್ಷೆ ಪ್ರಕಾರ ಕಾರ್ಯರೂಪಕ್ಕೆ ತರುವುದು. ಇದಕ್ಕೆ ಅನುಗುಣವಾಗಿ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಹಣಕಾಸು, ಸಿಬ್ಬಂದಿ ಮತ್ತು ಜವಾಬ್ದಾರಿಗಳನ್ನು ವಹಿಸುವುದು.

೨. ಪ್ರಾದೇಶಿಕ ಅಸಮತೋಲನವನ್ನು ಸರಿಪಡಿಸುವ ಯೋಜನೆಗಳನ್ನು ರೂಪಿಸುವಲ್ಲಿ ಪಂಚಾಯತ್ ರಾಜ್ ಮತ್ತು ನಗರ ಸ್ಥಳೀಯ ಸಂಸ್ಥೆಗಳನ್ನು ತೊಡಗಿಸಿಕೊಳ್ಳುವುದು.

೩. ಗ್ರಾಮ ಪಂಚಾಯತಿ ಮಟ್ಟದಲ್ಲಿ ಕೃಷಿ ಉತ್ಪನ್ನವನ್ನು ಹೆಚ್ಚಿಸುವ ಹಾಗೂ ಇತರೆ ಭೂ ಆಧಾರಿತ ಕಾರ್ಯಕ್ರಮಗಳನ್ನು ಕ್ರೋಢೀಕರಿಸುವುದು.

೪. "ಅಕ್ಷರ ದಾಸೋಹ" ಕಾರ್ಯಕ್ರಮವನ್ನು ಗ್ರಾಮ ಪಂಚಾಯತಿಗಳಿಗೆ ಮತ್ತು ನಗರ ಸ್ಥಳೀಯ ಸಂಸ್ಥೆಗಳಿಗೆ ವರ್ಗಾಯಿಸುವುದು.

೫. ಪ್ರಾಥಮಿಕ ಶಾಲೆಗಳು, ಗ್ರಾಮೀಣ ಗ್ರಂಥಾಲಯಗಳು, ವಯಸ್ಕರ ಶಿಕ್ಷಣ ಕೇಂದ್ರಗಳು, ಅಂಗನವಾಡಿಗಳು, ಎಎನ್ಎಂ ಉಪ ಕೇಂದ್ರಗಳು ಮತ್ತು ನ್ಯಾಯಬೆಲೆ ಅಂಗಡಿಗಳನ್ನು ಗ್ರಾಮ ಪಂಚಾಯತಿಯ ಆಡಳಿತ ವ್ಯಾಪ್ತಿಗೆ ತರುವುದು.

೬. ಗ್ರಾಮ ಪಂಚಾಯತಿ ಆಡಳಿತ ವ್ಯವಸ್ಥೆಯನ್ನು ಬಲಗೊಳಿಸುವುದು ಮತ್ತು ಗ್ರಾಮ ಮಟ್ಟದ ಕಂದಾಯ ಸಿಬ್ಬಂದಿ ಮತ್ತು ಜವಾಬ್ದಾರಿಗಳನ್ನು ಗ್ರಾಮ ಪಂಚಾಯತ್ ಆಡಳಿತ ವ್ಯಾಪ್ತಿಗೆ ಒಳಪಡಿಸುವುದು.

೭. ಸ್ಥಳೀಯ ಸಂಸ್ಥೆಗಳು ತಮ್ಮ ಹೊಣೆಗಾರಿಕೆಯನ್ನು ಕ್ರಮಬದ್ಧವಾಗಿ ನಿರ್ವಹಿಸಿಕೊಂಡು ಹೋಗಲು ಲೋಕಾಯುಕ್ತರ ಅಧೀನದಲ್ಲಿ ಪ್ರತಿ ಜಿಲ್ಲೆಯಲ್ಲಿ ಓಂಬಡ್ಸಮನ್ ಸಂಸ್ಥೆಯನ್ನು ಸ್ಥಾಪಿಸುವುದು.

(ಪು.ತಿ.ನೋ.)

೮. ನಿರಂತರ ತರಬೇತಿ, ಶಿಕ್ಷಣ, ಸಂವಹನ ಕಾರ್ಯಕ್ರಮಗಳ ಮೂಲಕ ಪಂಚಾಯತ್ ರಾಜ್ ಸಂಸ್ಥೆಗಳ ಸಾಮರ್ಥ್ಯವನ್ನು ಹೆಚ್ಚಿಸುವುದರ ಜೊತೆಗೆ ಗ್ರಾಮ ಪಂಚಾಯತಿಗಳ ತಾಂತ್ರಿಕ ಮತ್ತು ಹಣಕಾಸು ನಿರ್ವಹಣಾ ಸಾಮರ್ಥ್ಯವನ್ನು ಬಲಗೊಳಿಸುವುದು.

೯. ಗ್ರಾಮ ಪಂಚಾಯತಿಗಳನ್ನು ಗಣಕೀಕರಣಗೊಳಿಸಿ ಇ-ಆಡಳಿತಕ್ಕೆ ಚಾಲನೆ ನೀಡುವುದು.

೧೦. ಸಹಕಾರಿ ಸಾಲ ವ್ಯವಸ್ಥೆಯನ್ನು ಬಲಗೊಳಿಸಲು ಪ್ರಾಥಮಿಕ ವ್ಯವಸಾಯ ಸಹಕಾರಿ ಸಂಘಕ್ಕೆ ಗ್ರಾಮ ಪಂಚಾಯತ್ ಸದಸ್ಯರೊಬ್ಬರನ್ನು ನಾಮ ನಿರ್ದೇಶನ ಮಾಡುವುದು.

೧೧. ಗುತ್ತಿಗೆ ಮತ್ತು ಸಂಗ್ರಹಣೆ ಹಾಗೂ ನೀರು ಸರಬರಾಜು ಕಾಮಗಾರಿಗಳ ವಿಷಯಗಳಿಗೆ ಸಂಬಂಧಿಸಿದಂತೆ ನಗರ ಸ್ಥಳೀಯ ಸಂಸ್ಥೆಗಳಿಗೆ ಹಣಕಾಸು ಅಧಿಕಾರಗಳನ್ನು ಇನ್ನಷ್ಟು ಹೆಚ್ಚಿಸುವುದು.

೧೨. ನಗರ ಸ್ಥಳೀಯ ಸಂಸ್ಥೆಗಳಿಗೆ ನಗರ ಯೋಜನಾ ಪ್ರಕಾರ್ಯಗಳನ್ನು ವಹಿಸುವುದು.

೧೩. ನಿಗದಿತ ಮಟ್ಟದ ನೀರು ಸರಬರಾಜು ಮಾಡುವಂತೆ ನಗರ ಸ್ಥಳೀಯ ಸಂಸ್ಥೆಗಳನ್ನು ಶಕ್ತಗೊಳಿಸುವುದು.

೧೪. ರಾಜ್ಯದಲ್ಲಿ ಎಲ್ಲ ಒಂದನೇ ದರ್ಜೆಯ ನಗರಗಳಲ್ಲಿ ಒಳಚರಂಡಿ ವ್ಯವಸ್ಥೆಗಳನ್ನು ಅಳವಡಿಸುವುದು ಮತ್ತು ಸಮಗ್ರ ಘನ ತ್ಯಾಜ್ಯ ವಸ್ತು ನಿರ್ವಹಣಾ ಘಟಕಗಳನ್ನು ಸ್ಥಾಪಿಸುವುದು.

೧೫. ನಗರ ಸ್ಥಳೀಯ ಸಂಸ್ಥೆಗಳಿಗೆ ವೃತ್ತಿ ನಿರತ ಸಿಬ್ಬಂದಿಯನ್ನು ಒದಗಿಸುವುದು.

ಸರ್ಕಾರದ ಈ ಧೋರಣೆಗಳನ್ನು ಸ್ವಾಗತಿಸಿ ಸ್ಥಳೀಯ ಸಂಸ್ಥೆಗಳು ಕೆಳಗಿನ ಪ್ರಕ್ರಿಯೆಗಳಿಗೆ ಬದ್ಧವಾಗಿರುತ್ತವೆ.

ಪಂಚಾಯತ್ ರಾಜ್ ಸಂಸ್ಥೆಗಳು :

೧. ಸಾರ್ವಜನಿಕ ಹಣವನ್ನು ಖರ್ಚು ಮಾಡುವಲ್ಲಿ ಮತ್ತು ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವಲ್ಲಿ ಅತ್ಯುನ್ನತ ಮಟ್ಟದ ಸಮಗ್ರತೆ ಮತ್ತು ಪಾರದರ್ಶಕತೆಯನ್ನು ಕಾಯ್ದುಕೊಳ್ಳುವುದು

೨. ಪ್ರತಿ ವರ್ಷ ಕನಿಷ್ಠ ಎರಡು ವಾರ್ಡ ಸಭೆಗಳನ್ನು ಮತ್ತು ಎರಡು ಗ್ರಾಮ ಸಭೆಗಳನ್ನು ನಡೆಸುವುದು ;

೩. ಪ್ರತಿಯೊಂದು ಯೋಜನೆಯಡಿ ಅತ್ಯಂತ ಅರ್ಹ ಫಲಾನುಭವಿಗಳನ್ನು ವಾರ್ಡ ಮತ್ತು ಗ್ರಾಮ ಸಭೆಗಳಲ್ಲಿ ಆಯ್ಕೆ ಮಾಡುವುದು ;

೪. ತೆರಿಗೆ ಸುಧಾರಣೆಗಳು ಮತ್ತು ಹೆಚ್ಚಿನ ಸಂಗ್ರಹಣಾ ಸಾಮರ್ಥ್ಯದ ಮೂಲಕ ಪಂಚಾಯತ್ ರಾಜ್ ಸಂಸ್ಥೆಗಳ ಸಂಪನ್ಮೂಲಗಳನ್ನು ಹೆಚ್ಚಿಸುವುದು ಮತ್ತು ಎಲ್ಲ ವಸತಿ ಪ್ರದೇಶಗಳನ್ನು ಗ್ರಾಮ ಠಾಣಾ ವ್ಯಾಪ್ತಿಗೆ ಸೇರಿಸುವುದು.

೫. ಆದಾಯ ತರುವ ಸ್ವತ್ತುಗಳನ್ನು ಸ್ಥಾಪಿಸುವುದು ಮತ್ತು ನಿರ್ವಹಿಸುವುದು ;

೬. ಶ್ರದ್ಧೆ ಮತ್ತು ನಿಷ್ಠೆಯಿಂದ ಜನರ ಆಕಾಂಕ್ಷೆಗಳನ್ನು ಪೂರೈಸುವುದು ;

ನಗರ ಸ್ಥಳೀಯ ಸಂಸ್ಥೆಗಳು :

೧. ಸಂಪನ್ಮೂಲಗಳನ್ನು ವ್ಯಾಪಕ ಮತ್ತು ಪಾರದರ್ಶಕವಾಗಿ ಸಂಗ್ರಹಿಸುವುದು,

೨. ನಗರ ಸ್ಥಳೀಯ ಸಂಸ್ಥೆಗಳ ಆಡಳಿತದಲ್ಲಿ ವಿಶೇಷವಾಗಿ ಇ-ಆಡಳಿತದ ಸುಧಾರಣೆಗೆ ಬದ್ಧರಾಗುವುದು.

೩. ಪರಿಣಾಮಕಾರಿ ಸಾರ್ವಜನಿಕ ಕುಂದುಕೊರತೆ ನಿವಾರಣೆ ವ್ಯವಸ್ಥೆಯನ್ನು ಸ್ಥಾಪಿಸುವುದು.

೪. ನಗರ ಸ್ಥಳೀಯ ಸಂಸ್ಥೆಗಳ ಕಾರ್ಯನಿರ್ವಹಣೆಯಲ್ಲಿ ಬದ್ಧತೆ ಹಾಗೂ ಪಾರದರ್ಶಕತೆಯನ್ನು ಖಾತ್ರಿಪಡಿಸುವುದು.

ಸರ್ಕಾರ ಮತ್ತು ಸ್ಥಳೀಯ ಸಂಸ್ಥೆಗಳು ಮೇಲಿನ ಅಂಶಗಳಿಗೆ ಅನುಗುಣವಾಗಿ ಕೆಲಸ ಮಾಡುವುದಾಗಿ ಘೋಷಿಸುತ್ತೇವೆ.

******